2-30 P. M.

ಅಧ್ಯಕ್ಷರು.—ಹುಬ್ಬಳ್ಳಿಯ ವನಿತಾಸೇವಾ ಸಮಾಜದ ನಡೆದ ವಿಚಾರ ಇಲ್ಲಿ ಏತಕ್ಕೆ ಬರಬೇಕು ಎಂಬುದು ನನಗೆ ಅರ್ಥವಾಗುವುದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಇದು ಎಲ್ಲರಿಗೂ ಗೊತ್ತಿದೆ, ನನಗೂ ಈ ಬಗ್ಗೆ ಪತ್ರ ಬಂದಿದೆ.

ಅಧ್ಯಕ್ಷರು.—ಹಾವುಗಳೆಲ್ಲರೂ ಈ ಬಗ್ಗೆ ಇಷ್ಟೊಂದು ಆಸಕ್ತಿ ವಹಿಸಿದರೆ ಬಹಳ ಸಂತೋಷ.

ಶ್ರೀ ಡಿ. ಕೆ. ನಾಯ್ಕರ್.—ಈ ಬಗ್ಗೆ ಯೋಗ್ಯವಾದ ಮಾಹಿತಿಯನ್ನು ಸಂಗ್ರಹಣೆ ಮಾಡಿ ಮುಂದಿನ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಬಾಪುಗೌಡ.—ಸ್ವಾಮಿ ಹಂಮ್ನಾಬಾದಿನ ತಾಲ್ಲೂಕಿನಲ್ಲಿ ಸೂರ್ಯಭಾನು ಪ್ರತಾಪ್‌ರಾವ್ ಎನ್ನುವವರು ಸೂಯಿಸೈಡ್ ಮಾಡಿಕೊಂಡಿರುವ ಬಗ್ಗೆ ಪೋಲೀಸ್ ಎನ್‌ಕ್ವೈರಿ ನಡೆಯುತ್ತಿದೆ, ಅದನ್ನು ತಿಳಿದು ಹೇಳುತ್ತೇವೆ ಎಂದು ಸರ್ಕಾರದವರು ಹೇಳಿದ್ದರು.

ಅಧ್ಯಕ್ಷರು.—ಆ ಬಗ್ಗೆ ಆಮೇಲೆ ಮಾನ್ಯ ಮುಖ್ಯ ಮಂತ್ರಿಗಳು ಹೇಳುತ್ತಾರೆ.

(iv) re: Land Grant Committee.

ಶ್ರೀ ಎಚ್ ಎಸ್. ಸಿದ್ದಪ್ಪ.—ಸ್ವಾಮಿ, ಮಾನ್ಯ ರೆವಿನ್ಯೂ ಮಂತ್ರಿಗಳು ಲ್ಯಾಂಡ್ ರೆವಿನ್ಯೂ ಕಮಿಟಿಯನ್ನು ಮಾಡಿ ಯಾರು ಯಾರಿಗೆ ಜಮೀನು ಇಲ್ಲಪ್ಪೋ ಅವರೆಲ್ಲರಿಗೂ ಮತ್ತು ಇತರ ಬಡಬಗ್ಗರಿಗೂ ಜಮೀನು ಕೊಡುತ್ತೇವೆ ಎಂದು ಹೇಳಿದ್ದರು. ಅದು ಎಲ್ಲಿಯವರೆಗೆ ಬಂದಿದೆ. ಏತಕ್ಕೆಂದರೆ ಈಗ ಅಧಿಕಾರಿಗಳು ಏನು ಜಮೀನು ವಿಲೇವಾರಿ ಮಾಡುತ್ತಿದ್ದಾರೆ ಅದನ್ನು ನಿಲ್ಲಿಸಿ, ಈಗ ದರಖಾಸ್ತು ಜಮೀನಿಗಾಗಿ ಬಂದಿರುವ ಸಾವಿರಾರು ಅರ್ಜಿಗಳನ್ನು ವಿಲೇವಾರಿ ಮಾಡುವುದಕ್ಕೆ ಸೂಕ್ತ ವ್ಯವಸ್ಥೆ ಮಾಡಬೇಕು. ರಾಜ್ಯಪಾಲರ ಕಾಲದಲ್ಲಿ ಅಧಿಕಾರಿಗಳಿಂದ ಕೂಡಿದ ಲ್ಯಾಂಡ್‌ಗ್ರಾಂಟ್ ಕಮಿಟಿಯನ್ನು ಏನು ಮಾಡಿದ್ದರು, ಅದನ್ನು ಅಬಾಲಿಷ್ ಮಾಡಿ, ಅವರು ಈಗ ಏನು ಅನ್ಯಾಯ ಮಾಡುತ್ತಿದ್ದಾರೆ ಅದನ್ನು ತಡೆಗಟ್ಟಬೇಕೆಂದು ಮಾನ್ಯ ರೆವಿನ್ಯೂ ಮಂತ್ರಿಗಳು ಹಾಗೂ ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಎಸ್. ಹುಚ್ಚಮಾಸ್ತಿಗೌಡ.—ಅದು ನಾನು ಮೊದಲೇ ಹೇಳಿದ ಹಾಗೆ ಅದು ಗೆಜೆಟ್‌ನಲ್ಲಿ ಪಬ್ಲಿಷ್ ಆಗಬೇಕಾದ್ದರಿಂದ ಜಮೀನು ಹಂಚಿಕೆ ಸಮಿತಿಗಳ ರಚನೆ ಒಂದು ತಿಂಗಳು ತಡವಾಯಿತು. ಈಗ ಆ ಕಮಿಟಿಯಲ್ಲಿ ಯಾರು ಯಾರು ಇರಬೇಕು ಎಂಬುದನ್ನು ತೀರ್ಮಾನ ಮಾಡಿದ್ದೇವೆ ಸೋಮವಾರ ಅಥವಾ ಮಂಗಳವಾರ ಅವುಗಳನ್ನು ಅನೌನ್ಸ್ ಮಾಡುತ್ತೇನೆ.

ಶ್ರೀ ಕೋಣಂದೂರ್‌ಲಿಂಗಪ್ಪ.—ಲ್ಯಾಂಡ್ ಗ್ರಾಂಟ್ ಕಮಿಟಿಯನ್ನು ರಚನೆ ಮಾಡುವಾಗ ಖಾಸಗಿ ಯವರು ಮತ್ತು ಶಾಸನ ಸಭಾ ಸದಸ್ಯರ ಸಲಹೆಗಳನ್ನು ತೆಗೆದುಕೊಂಡಿದ್ದೀರಾ ?

ಶ್ರೀ ಎಸ್. ಹುಚ್ಚಮಾಸ್ತಿಗೌಡ.—ಎಲ್ಲರೂ ಸಲಹೆ ಕೊಟ್ಟಿದ್ದಾರೆ. ಯಾರಾದರೂ ಸಲಹೆ ಕೊಡದೇ ಇರುವವರು ಇದ್ದರೆ ಅವರು ಸಲಹೆಯನ್ನು ಕೊಡಬಹುದು.

SRI D. DEVRAJ URS.—The members of the legislature are bound to be there. I think the Taluk Board Presidents are going to be there. The Scheduled Castes members will be there. The Hon. Members are free to offer their suggestions. The Government will consider the suggestions given by the Hon. Members belonging to any party. The Government will certainly consider their suggestions.

SRI H. S. SIDDAPPA.—It is a mistake that the Tahsildar is the Chairman of the Committee.

SRI D. DEVRAJURS.—It is not a mistake.

(v) re: Affairs of the Ideal Co-operative Society

ಶ್ರೀ ಕಾಗೋಡು ತಿಮ್ಮಪ್ಪ.—ನಾನು ಒಂದು ಕಾಲ್‌ಅಟೆನ್‌ಷನ್ ನೋಟೀಸ್ ಕಳುಹಿಸಿದ್ದೆ. ಐಡಿಯಲ್ ಕೋ ಅಪರೇಟಿವ್ ಸೊಸೈಟಿಯಲ್ಲಿ ಸುಮಾರು ೫೦ ಲಕ್ಷ ರೂಪಾಯಿ ದುರುಪಯೋಗವಾಗಿದೆ.

ಅಧ್ಯಕ್ಷರು.—ನಮ್ಮ ಹತ್ತಿರ ಒಂದು ಸಾವಿರ ಕಾಲ್‌ಅಟೆನ್‌ಷನ್ ನೋಟೀಸ್‌ಗಳು ಇವೆ. ಹಿಂದೆ ಒಂದು ದಿವಸಕ್ಕೆ ಒಂದು ಕಾಲ್‌ಅಟೆನ್‌ಷನ್ ನೋಟೀಸ್ ಮಾತ್ರ ತೆಗೆದುಕೊಳ್ಳಲಾಗುತ್ತಿತ್ತು. ಈಗ ಒಂದು ದಿವಸಕ್ಕೆ ೩-೪ ಕಾಲ್‌ಅಟೆನ್‌ಷನ್ ನೋಟೀಸ್ ತೆಗೆದುಕೊಳ್ಳುತ್ತಿದ್ದೇವೆ. ಈ ಬಗ್ಗೆ ಅನೇಕ ಸಾರಿ ಶ್ರೀ ಸ್ಯೆನಕ್ ಅವರು ಅಬ್ಜಕ್ಷನ್ ರೈಜ್ ಮಾಡಿದ್ದಾರೆ.

SRI B. B. SAYANAK.—I have pointed out the rules of procedure. Why do you drag my name ?

MADAM SPEAKER.—From next time onwards I assure the hon. member that only one calling attention will be taken.

ಶ್ರೀ ಕಾಗೋಡು ತಿಮ್ಮಪ್ಪ.—೪೦೦ ಜನ ಸದಸ್ಯರಿರುವ ಒಂದು ಸೊಸೈಟಿಯಲ್ಲಿ ಸುಮಾರು ೫೦ ಲಕ್ಷ ರೂಪಾಯಿ ದುರುಪಯೋಗವಾಗಿದೆ.

SRI D. DEVRAJ URS —The matter is under enquiry. There appears to be a *prima facie* ase in regard to its mismanagement of funds and other things. An enquiry is going on.

ಶ್ರೀ ಜಿ. ಪುಟ್ಟಸ್ವಾಮಿ.—ಚಿಕ್ಕಮಗಳೂರಿನಲ್ಲಿರುವ ಫರ್ಸ್ಟ್‌ಗ್ರೇಡ್ ಕಾಲೇಜಿನಲ್ಲಿ ಲೆಕ್ಚರರ್ಸ್ ಇಲ್ಲ. ಬಹಳ ತೊಂದರೆಯಾಗಿದೆ. ಈ ಬಗ್ಗೆ ನಾನು ಒಂದು ಕಾಲ್‌ಅಟೆನ್‌ಷನ್ ನೋಟೀಸ್ ಕೊಟ್ಟಿದ್ದೆ. ಅದು ಏನಾಯಿತೂ ಎಂಬುದು ಗೊತ್ತಾಗಲಿಲ್ಲ.

ಅಧ್ಯಕ್ಷರು.—ಕಾಲ್ ಅಟೆನ್‌ಷನ್ ನೋಟೀಸ್‌ಗಳ ಬಗ್ಗೆ ನಾನು ಈಗಾಗಲೇ ಹೇಳಿದ್ದೇನೆ.

(vi) re: Elections of Taluk Development Boards.

ಶ್ರೀ ಬಿ. ಪುಟ್ಟಸ್ವಾಮಯ್ಯ.—ತಾಲ್ಲೂಕು ಅಭಿವೃದ್ಧಿ ಮಂಡಲಿಗಳ ಚುನಾವಣೆ. ಈ ಸಾಲಿನ ಅಕ್ಟೋಬರ್ ನವಂಬರ್ ತಿಂಗಳಿನಲ್ಲಿ ನಡೆಯುತ್ತದೆ ಎಂದು ಮೊದಲು ಸರ್ಕಾರದವರು ತಿಳಿಸಿದ್ದರು. ಇತ್ತೀಚೆಗೆ ಆ ಚುನಾವಣೆಗಳನ್ನು ಮುಂದೂಡುತ್ತಾರೆ ಎಂಬುದು ಎಲ್ಲರ ಗಮನಕ್ಕೆ ಬಂದಿದೆ. ಈ ರೀತಿ ತಾಲ್ಲೂಕು ಅಭಿವೃದ್ಧಿ ಮಂಡಲಿಗಳ ಚುನಾವಣೆಯನ್ನು ಮುಂದೂಡಿ ಈಗ ಇರತಕ್ಕ ತಾಲ್ಲೂಕು ಅಭಿವೃದ್ಧಿ ಮಂಡಲಿಗಳನ್ನು ರದ್ದು ಮಾಡಿ ಅವುಗಳಿಗೆ ಆಡಳಿತಾಧಿಕಾರಿಗಳನ್ನು ನೇಮಕ ಮಾಡುತ್ತಾರೆ ಎಂದು ವರ್ತಮಾನ ಬಂದಿದೆ. ಈಗ ಮಾನ್ಯ ಮುಖ್ಯ ಮಂತ್ರಿಗಳು ಸಭೆಯಲ್ಲಿದ್ದಾರೆ. ಅವರು ಈ ಬಗ್ಗೆ ಸ್ಪಷ್ಟೀಕರಣ ಮಾಡಬೇಕು ಎಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಡಿ. ದೇವರಾಜ್ ಅರಸ್ !—ಮಾನ್ಯ ಅಧ್ಯಕ್ಷರೇ ಈ ವಿಚಾರದಲ್ಲಿ ಮಾನ್ಯ ಸದಸ್ಯರು ಏನು ಹೇಳಿದ್ದಾರೆ ಅದಕ್ಕೆ ಯಾವ ಆಧಾರವೂ ಇಲ್ಲ. ಅದು ಎಲ್ಲಾ ಊಹಾಪೋಹದ ಮಾತು ಯಾವರೀತಿಯಿಂದಲೂ ಆ ಚುನಾವಣೆಗಳನ್ನು ಮುಂದೂಡುವುದಾಗಲೀ, ಅಡ್ಮಿನಿಸ್ಟ್ರೇಟರನ್ನು ನೇಮಕ ಮಾಡುವುದಾಗಲೀ, ಸರ್ಕಾರದ ಯೋಚನೆಯಲ್ಲಿಲ್ಲ. ಒಂದು ತಿಂಗಳು ಹೆಚ್ಚು ಕಡಿಮೆ ಆಗಬಹುದು. ಆದರೆ ಚುನಾವಣೆಗಳನ್ನು ಮುಂದೂಡುವ ಉದ್ದೇಶ ನಮಗೆ ಇಲ್ಲ.

VII. Hunger Strike by Chairman and Members of that Housing Society at Bijapur.

ಶ್ರೀ ಎಚ್ ಡಿ. ದೇವೇಗೌಡ :— ಬಿಜಾಪುರ ಸಿಟಿಯೊಳಗೆ ಮುನಿಸಿಪಲ್ ಎಂಪ್ಲಾಯೀಸ್ ಹರಿಜನ ಕೋ-ಆಪರೇಟಿವ್ ಹೌಸಿಂಗ್ ಸೊಸೈಟಿ-ಇವರಿಗೆ ಮನೆಗಳನ್ನು ಕಟ್ಟಿಕೊಳ್ಳಿವುದಕ್ಕೆ ಜಮೀನನ್ನು ಕೊಟ್ಟಿರುತ್ತಾರೆ ಅದರ ಬಗ್ಗೆ ಸುಮಾರು ೭೫೦೦ ರೂಪಾಯಿಗಳನ್ನು ಲ್ಯಾಂಡ್ ಅಕ್ವಿಸಿಷನ್ ಚಾರ್ಜ್‌ಸ್‌ಗೋಸ್ಕರ ಅವರು ತುಂಬಿದ್ದಾರೆ. ಹಿಂದಿನ ಸರ್ಕಾರದವರು ಇವರಿಗೆ ನಿವೇಶನಗಳನ್ನು ಕೊಟ್ಟು ಅದಕ್ಕೆ ತುಂಬಿಸಬೇಕಾದ ಹಣವನ್ನು ತುಂಬಿಸಿದ್ದಾರೆ. ಈ ಮಧ್ಯೆ ಎರಡು ಕಾಂಗ್ರೆಸ್ ಆದ ನಂತರ ಅಲ್ಲಿ ತಕರಾರು ಬಂದಿದೆ. ಅವರು ಜಿಲ್ಲಾಧಿಕಾರಿಗಳ ಮುಂದೆ ಅಪೀಲ್ ಹೋಗಿದ್ದಾರೆ. ಅಪೀಲ್ ಹೋದಾಗ ಜಮೀನು ಅವರಿಗೆ ಕೊಟ್ಟಿದ್ದು